**All India Radio: Bangalore**
**National Bulletin In Kannada**
**01.12.2025 07.35 a.m.**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**01.12.2025 07.35 a.m.**
**<><><><>**

ಮುಖ್ಯಾಂಶಗಳು

1. ಸಂಸತ್ತಿನ ಚಳಿಗಾಲದ ಅಧಿವೇಶನ ಇಂದಿನಿಂದ ಆರಂಭ ; ಹಲವು ಮಹತ್ವದ ಮಸೂದೆಗಳ ಮಂಡನೆ ನಿರೀಕ್ಷೆ
2. ನವದೆಹಲಿಯಲ್ಲಿಂದು ಸರಸ್ ಅಜೀವಿಕ ಆಹಾರ ಉತ್ಸವಕ್ಕೆ ಕೇಂದ್ರ ಸಚಿವ ಶಿವರಾಜ್ ಸಿಂಗ್ ಚೌವ್ಹಾಣ್ ಚಾಲನೆ
3. ಇಂದು ವಿಶ್ವ ಏಡ್ಸ್ ದಿನ ; ಕೇಂದ್ರ ಸಚಿವ ಜೆ.ಪಿ. ನಡ್ಡಾ ನೇತೃತ್ವದಲ್ಲಿ ರಾಷ್ಟ್ರಮಟ್ಟದ ಆಚರಣೆ
4. ಮೂರು ಪಂದ್ಯಗಳ ಏಕದಿನ ಕ್ರಿಕೆಟ್ ಸರಣಿ ; ದಕ್ಷಿಣ ಆಫ್ರಿಕಾ ವಿರುದ್ಧ ಭಾರತಕ್ಕೆ ೧೭ ರನ್‌ಗಳ ಜಯ

<><><><>

ಸಂಸತ್ತಿನ ಚಳಿಗಾಲದ ಅಧಿವೇಶನ ಇಂದು ಆರಂಭವಾಗಲಿದೆ. ೧೯ ದಿನಗಳ ಅವಧಿಯಲ್ಲಿ ಈ ಅಧಿವೇಶನ ಒಟ್ಟು ೧೫ ಸಭೆಗಳನ್ನು ನಡೆಸಲಿದೆ ಎಂದು ನಮ್ಮ ವರದಿಗಾರರು ವರದಿ ಮಾಡಿದ್ದಾರೆ. ಒಟ್ಟು ೧೩ ಮಸೂದೆಗಳನ್ನು ಶಾಸಕಾಂಗ ವ್ಯವಹಾರದಲ್ಲಿ ಪಟ್ಟಿ ಮಾಡಲಾಗಿದ್ದು, ಇವುಗಳನ್ನು ಅಧಿವೇಶನದಲ್ಲಿ ಅಂಗೀಕಾರಕ್ಕೆ ತೆಗೆದುಕೊಳ್ಳುವ ಸಾಧ್ಯತೆಯಿದೆ. ಮಸೂದೆಗಳಲ್ಲಿ - ರಾಷ್ಟ್ರೀಯ ಹೆದ್ದಾರಿ ತಿದ್ದುಪಡಿ ಮಸೂದೆ, ಪರಮಾಣು ಶಕ್ತಿ ಮಸೂದೆ, ಕಾರ್ಪೊರೇಟ್ ಕಾನೂನುಗಳು ತಿದ್ದುಪಡಿ ಮಸೂದೆ, ವಿಮಾ ಕಾನೂನುಗಳು ತಿದ್ದುಪಡಿ ಮಸೂದೆ ಮತ್ತು ಭಾರತೀಯ ಉನ್ನತ ಶಿಕ್ಷಣ ಆಯೋಗದ ಮಸೂದೆ - ೨೦೨೫ ಸೇರಿವೆ. ಲೋಕಸಭೆಯಲ್ಲಿ, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಕೇಂದ್ರ ಅಬಕಾರಿ ತಿದ್ದುಪಡಿ ಮಸೂದೆ ಮತ್ತು ಆರೋಗ್ಯ ಭದ್ರತಾ ರಾಷ್ಟ್ರೀಯ ಭದ್ರತಾ ಸೆಸ್ ಮಸೂದೆ, ೨೦೨೫ ಅನ್ನು ಮಂಡಿಸಲಿದ್ದಾರೆ. ಇದಲ್ಲದೆ, ೨೦೨೫-೨೬ನೇ ಸಾಲಿನ ಅನುದಾನಕ್ಕಾಗಿ ಪೂರಕ ಬೇಡಿಕೆಗಳ ಮೊದಲ ಹಂತದ ಚರ್ಚೆ ಮತ್ತು ಮತದಾನವನ್ನು ಸಹ ಅಧಿವೇಶನದಲ್ಲಿ ಕೈಗೊಳ್ಳಲಾಗುವುದು. ನಿನ್ನೆ ಕೇಂದ್ರ ಸರ್ಕಾರ ಸಂಸತ್ತಿನ ಉಭಯ ಸದನಗಳ ಸುಗಮ ಕಾರ್ಯನಿರ್ವಹಣೆಯನ್ನು ಖಚಿತಪಡಿಸಿಕೊಳ್ಳಲು ನವದೆಹಲಿಯಲ್ಲಿ ಸರ್ವಪಕ್ಷ ಸಭೆಯನ್ನು ಕರೆದಿತ್ತು. ಸರ್ವಪಕ್ಷ ಸಭೆಯ ಅಧ್ಯಕ್ಷತೆಯನ್ನು ರಕ್ಷಣಾ ಸಚಿವ ರಾಜನಾಥ್ ಸಿಂಗ್ ವಹಿಸಿದ್ದರು ಮತ್ತು ಸಭೆಯಲ್ಲಿ ರಾಜ್ಯಸಭೆಯ ಸದನದ ನಾಯಕ ಜೆ.ಪಿ. ನಡ್ಡಾ, ಸಂಸದೀಯ ವ್ಯವಹಾರಗಳ ರಾಜ್ಯ ಸಚಿವ ಅರ್ಜುನ್ ರಾಮ್ ಮೇಘ್ವಾಲ್ ಮತ್ತು ಡಾ. ಎಲ್. ಮುರುಗನ್, ಕಾಂಗ್ರೆಸ್ ನಾಯಕ ಗೌರವ್ ಗೊಗೊಯ್, ಡಿಎಂಕೆ ನಾಯಕ ತಿರುಚಿ ಶಿವ, ಟಿಎಂಸಿ ನಾಯಕ ಡೆರಿಕ್ ಒ. ಬ್ರಿಯಾನ್ ಸೇರಿದಂತೆ ೩೬ ರಾಜಕೀಯ ಪಕ್ಷಗಳ ೫೦ ನಾಯಕರು ಭಾಗವಹಿಸಿದ್ದರು. ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, ಚಳಿಗಾಲದ ಅಧಿವೇಶನದಲ್ಲಿ ಉಭಯ ಸದನಗಳ ಸುಗಮ ಕಾರ್ಯನಿರ್ವಹಣೆಗೆ ಸಹಕಾರ ನೀಡುವಂತೆ ಸರ್ಕಾರ ಎಲ್ಲಾ ರಾಜಕೀಯ ಪಕ್ಷಗಳ ನಾಯಕರಿಗೆ ಮನವಿ ಮಾಡಿದೆ ಎಂದು ಹೇಳಿದರು.

<><><><>

ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು ಇಂದು ನವದೆಹಲಿಯಲ್ಲಿ ಸರಸ್ ಆಜೀವಿಕ ಆಹಾರ ಉತ್ಸವ ೨೦೨೫ ಅನ್ನು ಉದ್ಘಾಟಿಸಲಿದ್ದಾರೆ. ದೇಶಾದ್ಯಂತ ೨೫ ರಾಜ್ಯಗಳ ಸುಮಾರು ೩೦೦ ಲಖ್‌ಪತಿ ದೀದಿಗಳು ಮತ್ತು ಸ್ವಸಹಾಯ ಗುಂಪುಗಳ ಮಹಿಳೆಯರು ಈ ಉತ್ಸವದಲ್ಲಿ ಭಾಗವಹಿಸಲಿದ್ದಾರೆ ಎಂದು ಗ್ರಾಮೀಣಾಭಿವೃದ್ಧಿ ಸಚಿವಾಲಯ ತಿಳಿಸಿದೆ. ಒಟ್ಟು ೬೨ ಮಳಿಗೆಗಳಲ್ಲಿ ೫೦ ಮಳಿಗೆಗಳು ನೇರ ಆಹಾರವನ್ನು ನೀಡಲಿದ್ದು, ೧೨ ಮಳಿಗೆಗಳು ಉತ್ಸವದಲ್ಲಿ ನೈಸರ್ಗಿಕ ಆಹಾರ ಉತ್ಪನ್ನಗಳನ್ನು ನೀಡಲಿವೆ ಎಂದು ತಿಳಿಸಲಾಗಿದೆ. ಹರಿಯಾಣ, ಅರುಣಾಚಲ ಪ್ರದೇಶ, ಮಹಾರಾಷ್ಟ್ರ, ಕೇರಳ, ಅಸ್ಸಾಂ, ಉತ್ತರ ಪ್ರದೇಶ, ಉತ್ತರಾಖಂಡ, ಗೋವಾ ಮತ್ತು ಗುಜರಾತ್ ಸೇರಿದಂತೆ ವಿವಿಧ ರಾಜ್ಯಗಳು ಆಹಾರ ಉತ್ಸವದಲ್ಲಿ ಭಾಗವಹಿಸುತ್ತಿವೆ ಎಂದು ಸಚಿವಾಲಯ ತಿಳಿಸಿದೆ. ದೆಹಲಿ ಮತ್ತು ನೆರೆಯ ನಗರಗಳಾದ್ಯಂತದ ಪ್ರವಾಸಿಗರಿಗೆ ದೇಶದ ವೈವಿಧ್ಯಮಯ ಆಹಾರ ಸಂಸ್ಕೃತಿ ಮತ್ತು ಸಾಮಾಜಿಕ ರಚನೆಯನ್ನು ಪ್ರದರ್ಶಿಸುವ ೫೦೦ ಕ್ಕೂ ಹೆಚ್ಚು ಸೊಗಸಾದ ಖಾದ್ಯಗಳನ್ನು ಸವಿಯಲು ಸಾಧ್ಯವಾಗುತ್ತದೆ. ಆಹಾರ ಉತ್ಸವ ಈ ತಿಂಗಳ ೯ ರವರೆಗೆ ಮುಂದುವರಿಯಲಿದ್ದು, ಬೆಳಿಗ್ಗೆ ೧೧:೩೦ ರಿಂದ ರಾತ್ರಿ ೯:೩೦ ರವರೆಗೆ ಸಾರ್ವಜನಿಕರಿಗೆ ತೆರೆದಿರುತ್ತದೆ.

<><><><>

ದೇಶಾದ್ಯಂತ ಇಂದು ಗೀತಾ ಜಯಂತಿಯನ್ನು ಆಚರಿಸಲಾಗುತ್ತಿದೆ. ಐದು ಸಾವಿರ ವರ್ಷಗಳ ಹಿಂದೆ ಕುರುಕ್ಷೇತ್ರದ ಯುದ್ಧಭೂಮಿಯಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಭಗವದ್ಗೀತೆಯ ಕಾಲಾತೀತ ಬೋಧನೆಗಳನ್ನು ನೀಡಿದ ಕ್ಷಣವನ್ನು ಈ ದಿನ ಸ್ಮರಿಸಲಾಗುತ್ತದೆ. ಗೀತಾ ಜಯಂತಿ ಕೇವಲ ಧಾರ್ಮಿಕ ಆಚರಣೆಯ ದಿನವಾಗಿರದೇ, ಶ್ರೀಕೃಷ್ಣನು ನೀಡಿದ ಸಾರ್ವತ್ರಿಕ ಜ್ಞಾನವನ್ನು ಸ್ಮರಿಸುವ ದಿನವಾಗಿದೆ. ಆ ಜ್ಞಾನ ಲಕ್ಷಾಂತರ ಜನರಿಗೆ ಅವರ ಆಧ್ಯಾತ್ಮಿಕ ಮತ್ತು ದೈನಂದಿನ ಜೀವನದಲ್ಲಿ ಮಾರ್ಗದರ್ಶನ ನೀಡುತ್ತಲೇ ಇದೆ. ಜೀವನ, ಕರ್ತವ್ಯ ಮತ್ತು

ಅಸ್ತಿತ್ವದ ಸ್ವರೂಪದ ಬಗ್ಗೆ ಅತ್ಯಂತ ಮೂಲಭೂತ ಪ್ರಶ್ನೆಗಳಿಗೆ ಪರಿಹಾರಗಳನ್ನು ಒದಗಿಸುತ್ತದೆ. ನಿನ್ನೆ ಆಕಾಶವಾಣಿಯಲ್ಲಿ ನಡೆದ ತಮ್ಮ ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ, ಪ್ರಧಾನಿ ನರೇಂದ್ರ ಮೋದಿ ಅವರು ಭಗವದ್ಗೀತೆಯಲ್ಲಿ ಹೆಚ್ಚುತ್ತಿರುವ ಜಾಗತಿಕ ಆಸಕ್ತಿಯನ್ನು ಒತ್ತಿ ಹೇಳಿದರು. ಜಗತ್ತಿನಾದ್ಯಂತ ಜನರು ಗೀತೆಯಿಂದ ಹೇಗೆ ಪ್ರೇರಿತರಾಗುತ್ತಿದ್ದಾರೆ ಎಂಬುದನ್ನು ನೋಡಿ ತಾವು ತುಂಬಾ ಪ್ರಭಾವಿತರಾಗಿರುವುದಾಗಿ ಅವರು ತಿಳಿಸಿದರು. ಯುರೋಪ್ ಮತ್ತು ಮಧ್ಯ ಏಷ್ಯಾ ಸೇರಿದಂತೆ ಪ್ರಪಂಚದಾದ್ಯಂತದ ಅನೇಕ ದೇಶಗಳ ಜನರು ಹರಿಯಾಣದ ಕುರುಕ್ಷೇತ್ರದಲ್ಲಿ ಇತ್ತೀಚೆಗೆ ನಡೆದ ಅಂತಾರಾಷ್ಟ್ರೀಯ ಗೀತಾ ಮಹೋತ್ಸವದಲ್ಲಿ ಭಾಗವಹಿಸಿದ್ದರು ಎಂದು ಮಾಹಿತಿ ನೀಡಿದರು.

**ಧ್ವನಿ : ನರೇಂದ್ರ ಮೋದಿ (೨೦ ಸೆಕೆಂಡ್‌ಗಳು)**

<><><>

ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಜೆ.ಪಿ.ನಡ್ಡಾ ಅವರು, ಇಂದು ೨೦೨೫ರ ರಾಷ್ಟ್ರೀಯ ಮಟ್ಟದ ವಿಶ್ವ ಏಡ್ಸ್ ದಿನಾಚರಣೆಯ ನೇತೃತ್ವ ವಹಿಸಲಿದ್ದಾರೆ. ಎಚ್‌ಐವಿ ತಡೆಗಟ್ಟುವಿಕೆ, ಚಿಕಿತ್ಸೆ, ಆರೈಕೆ ಮತ್ತು ಕಳಂಕ ನಿರ್ಮೂಲನೆಗೆ ರಾಷ್ಟ್ರೀಯ ದೃಷ್ಟಿಕೋನವನ್ನು ಮುನ್ನಡೆಸುವ ಸರ್ಕಾರದ ಅಚಲ ಬದ್ಧತೆಯನ್ನು ಪುನರುಚ್ಚರಿಸುವುದು ಈ ಆಚರಣೆಯ ಉದ್ದೇಶವಾಗಿದೆ. ಸಾರ್ವಜನಿಕರಿಗೆ ಏಡ್ಸ್ ಕುರಿತು ಇರುವ ಆತಂಕವನ್ನು ಕೊನೆಗೊಳಿಸುವ ಗುರಿಯನ್ನು ಸರ್ಕಾರ ಹೊಂದಿದೆ. ಸರ್ಕಾರಿ ನಾಯಕರು, ಅಭಿವೃದ್ಧಿ ಪಾಲುದಾರರು, ಯುವ ಪ್ರತಿನಿಧಿಗಳು, ಸಮುದಾಯ ವಕೀಲರು, ಎಚ್‌ಐವಿ ಪೀಡಿತ ಜನರು ಮತ್ತು ಆರೋಗ್ಯ ಕಾರ್ಯಕರ್ತರನ್ನು ಈ ಕಾರ್ಯಕ್ರಮವು ಒಟ್ಟುಗೂಡಿಸುತ್ತದೆ. ಈ ಕಾರ್ಯಕ್ರಮದ ಸಂದರ್ಭದಲ್ಲಿ, ನ್ಯಾಕೊ ನ ರಾಷ್ಟ್ರೀಯ ಮಲ್ಟಿಮೀಡಿಯಾ ಉಪಕ್ರಮದ ಅಡಿಯಲ್ಲಿ ಹೊಸ ಅಭಿಯಾನದ ವೀಡಿಯೊ ಸರಣಿಯನ್ನು ಪ್ರಾರಂಭಿಸಲಾಗುವುದು. ಈ ಕಾರ್ಯಕ್ರಮವು ಆರಂಭಿಕ ಪರೀಕ್ಷೆ, ಚಿಕಿತ್ಸೆಯ ಅನುಸರಣೆ ಮತ್ತು ಆತ್ಮವಿಶ್ವಾಸದಿಂದ ಬದುಕುವ ವಿಷಯದ ಮೇಲೆ ವಿಶೇಷ ನೇರ ಸಂಗೀತ ಪ್ರದರ್ಶನವನ್ನು ಸಹ ಒಳಗೊಂಡಿರುತ್ತದೆ.

<><><>

ವಿಶ್ವ ಕೌಶಲ್ಯ ಏಷ್ಯಾ ಸ್ಪರ್ಧೆ - ೨೦೨೫ರಲ್ಲಿ ೨೮ ರಾಷ್ಟ್ರಗಳ ವಿರುದ್ಧ ಸ್ಪರ್ಧಿಸಿ ಭಾರತ, ತನ್ನ ಮೊದಲ ಭಾಗವಹಿಸುವಿಕೆಯಲ್ಲಿ ಆನೇ ಸ್ಥಾನವನ್ನು ಗಳಿಸುವ ಮೂಲಕ ಜಾಗತಿಕ ಕೌಶಲ್ಯ ಹಂತದಲ್ಲಿ ಮಹತ್ವದ ಮೈಲಿಗಲ್ಲನ್ನು ಸಾಧಿಸಿದೆ. ಸ್ಪರ್ಧೆಯಲ್ಲಿ ಭಾರತವು ಸಾಂಪ್ರದಾಯಿಕ ಮತ್ತು ತಂತ್ರಜ್ಞಾನ ಆಧಾರಿತ ಕೌಶಲ್ಯ ವಿಭಾಗಗಳಲ್ಲಿ ಒಂದು ಬೆಳ್ಳಿ, ಎರಡು ಕಂಚಿನ ಪದಕಗಳು ಮತ್ತು ಮೂರು ಉತ್ಕೃಷ್ಟತಾ ಪದಕಗಳನ್ನು ಗೆದ್ದಿದೆ. ಭಾರತೀಯ ಆಟಗಾರರ ಸಾಧನೆಯ ಕುರಿತು, ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ ರಾಜ್ಯ ಸಚಿವ ಜಯಂತ್ ಚೌಧರಿ ಮಾತನಾಡಿ, ಸ್ಪರ್ಧೆಯಲ್ಲಿ ಭಾರತದ ಸಾಧನೆಯು ದೇಶದ ಯುವ ಪ್ರತಿಭೆಯ ಆತ್ಮವಿಶ್ವಾಸ, ಸೃಜನಶೀಲತೆ ಮತ್ತು ಶಿಸ್ತನ್ನು ಪ್ರತಿಬಿಂಬಿಸುತ್ತದೆ ಎಂದು ಹೇಳಿದರು.

<><><>

ದಿತ್ವಾ ಚಂಡಮಾರುತದ ಪ್ರಭಾವ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದ್ದು, ಕಡಲೂರಿನಿಂದ ಪೂರ್ವಕ್ಕೆ ಸುಮಾರು ೯೦ ಕಿಲೊಮೀಟರ್, ಕಾರೈಕಲ್‌ನಿಂದ ಈಶಾನ್ಯಕ್ಕೆ ೧೩೦ ಕಿಲೊಮೀಟರ್, ಪುದುಚೇರಿಯಿಂದ ಪೂರ್ವಕ್ಕೆ ೯೦ ಕಿಲೊಮೀಟರ್, ಮತ್ತು ಚೆನ್ನೈನಿಂದ ಪೂರ್ವಕ್ಕೆ ೧೪೦ ಕಿಲೊಮೀಟರ್ ದೂರದಲ್ಲಿದೆ. ಇದು ಉತ್ತರ ತಮಿಳುನಾಡಿನಿಂದ ಪಾಂಡಿಚೇರಿ ಕರಾವಳಿಗೆ ಉತ್ತರಕ್ಕೆ ಚಲಿಸುವ ಸಾಧ್ಯತೆಯಿದೆ ಮತ್ತು ಇಂದು ಬೆಳಿಗ್ಗೆ ಕ್ರಮೇಣ ಇಳಿಮುಖವಾಗಲಿದೆ. ಕಾರೈಕಲ್ ಮತ್ತು ಚೆನ್ನೈನಲ್ಲಿ ಡಾಪ್ಲರ್ ಹವಾಮಾನ ರೇಡರ್‌ಗಳಿಂದ ಇದನ್ನು ಮೇಲ್ವಿಚಾರಣೆ ಮಾಡಲಾಗುತ್ತಿದೆ. ಚೆನ್ನೈ, ಎನ್ನೋರ್, ಕಟ್ಟುಪಲ್ಲಿ, ಪುದುಚೇರಿ, ಕಡಲೂರು, ನಾಗಪಟ್ಟಣಂ, ಕಾರೈಕಲ್, ಪಂಬನ್ ಮತ್ತು ತೂತುಕುಡಿ ಬಂದರುಗಳಲ್ಲಿ ಪೋರ್ಟ್ ಸಿಗ್ನಲ್ ಎಚ್ಚರಿಕೆ ಸಂಖ್ಯೆ ಮೂರು ಅನ್ನು ನೀಡಲಾಗಿದೆ.

<><><>

ಹಾರ್ನ್‌ಬಿಲ್ ಉತ್ಸವದ ೨೬ನೇ ಆವೃತ್ತಿಯು ಇಂದು ನಾಗಾಲ್ಯಾಂಡ್‌ನ ಕೊಹಿಮಾದಲ್ಲಿರುವ ಕಿಸಾಮಾ ಎಂಬ ಪಾರಂಪರಿಕ ಗ್ರಾಮದಲ್ಲಿ ಪ್ರಾರಂಭವಾಗಲಿದೆ. ನಾಗಾಲ್ಯಾಂಡ್‌ನ ರಾಜ್ಯೋತ್ಸವ ದಿನದೊಂದಿಗೆ, ಹತ್ತು ದಿನಗಳ ಈ ಸಂಭ್ರಮವು ಮತ್ತೊಮ್ಮೆ ಎಲ್ಲಾ ಪ್ರಮುಖ ನಾಗಾ ಬುಡಕಟ್ಟು ಜನಾಂಗಗಳನ್ನು ಒಂದೇ ಸೂರಿನಡಿ ಒಟ್ಟುಗೂಡಿಸುತ್ತದೆ. ಜಾನಪದ, ಸಂಗೀತ, ಕರಕುಶಲ ವಸ್ತುಗಳು ಮತ್ತು ಪಾಕಪದ್ಧತಿಯ ಮೂಲಕ ರಾಜ್ಯದ ವಿಶಿಷ್ಟ ಸಂಪ್ರದಾಯಗಳನ್ನು ಪ್ರದರ್ಶಿಸುತ್ತದೆ.

<><><>

ರಾಂಚಿಯಲ್ಲಿ ನಡೆದ ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಿನ ೩ ಪಂದ್ಯಗಳ ಏಕದಿನ ಕ್ರಿಕೆಟ್ ಸರಣಿಯ ಮೊದಲ ಪಂದ್ಯದಲ್ಲಿ ಭಾರತ ೧೭ ರನ್‌ಗಳ ಗೆಲುವು ಸಾಧಿಸಿದೆ. ಭಾರತ ನೀಡಿದ್ದ ೩೫೦ ರನ್‌ಗಳ ಬೃಹತ್ ಮೊತ್ತದ ಗುರಿ ಬೆನ್ನತ್ತಿದ ದಕ್ಷಿಣ ಆಫ್ರಿಕಾ ನಿಗದಿತ ೫೦ ಓವರ್‌ಗಳಲ್ಲಿ ಇನ್ನೂ ೪ ಎಸೆತಗಳು ಬಾಕಿ ಇದ್ದಾಗಲೇ ತನ್ನೆಲ್ಲಾ ವಿಕೆಟ್ ಕಳೆದುಕೊಂಡು ೨೩೨ ರನ್ ಗಳಿಸಲಷ್ಟೇ ಶಕ್ತವಾಯಿತು. ಇದಕ್ಕೂ ಮುನ್ನ ಟಾಸ್ ಗೆದ್ದು ದಕ್ಷಿಣ ಆಫ್ರಿಕಾ ಬೌಲಿಂಗ್ ಆಯ್ದುಕೊಂಡಿತು. ಭಾರತ ವಿರಾಟ್ ಕೊಹ್ಲಿ ಅವರ ೧೩೫, ಕೆ.ಎಲ್. ರಾಹುಲ್

ಅವರ ೬೦ ಹಾಗೂ ರೋಹಿತ್ ಶರ್ಮ ಅವರ ೫೭ ರನ್‌ಗಳ ನೆರವಿನಿಂದ ೮ ವಿಕೆಟ್ ನಷ್ಟಕ್ಕೆ ೩೪೯ ರನ್‌ಗಳ ಬೃಹತ್ ಮೊತ್ತ ಪೇರಿಸಿತು. ಭಾರತ ಪರ ವಿರಾಟ್ ಕೊಹ್ಲಿ, ಈ ಪಂದ್ಯದಲ್ಲಿ ೫೨ನೇ ಏಕದಿನ ಶತಕ ದಾಖಲಿಸಿ ಅದ್ಭುತ ಪ್ರದರ್ಶನ ನೀಡಿದರು. ರೋಹಿತ್ ಶರ್ಮ ಅತಿ ಹೆಚ್ಚು ಸಿಕ್ಸ್‌ರ್‌ಗಳನ್ನು ಬಾರಿಸಿದ ಆಟಗಾರರ ಪಟ್ಟಿಯಲ್ಲಿ ಪಾಕಿಸ್ತಾನದ ಶಾಹೀದ್ ಅಫ್ರಿದಿ ದಾಖಲೆಯನ್ನು ಮುರಿದರು. ಈ ಗೆಲುವಿನ ಮೂಲಕ ಭಾರತ ೩ ಪಂದ್ಯಗಳ ಸರಣಿಯಲ್ಲಿ ೧-೦ ಅಂತರದಿಂದ ಮುನ್ನಡೆ ಸಾಧಿಸಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>